ದಿನಾಂಕ 27-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲು: ಆರೋಪಿತರ ಪರ ಶ್ರೀ ಎಸ್.ಎ. ವಕೀಲರಿಂದ:</u>**

1) ತೊಟ್ಟಂ ಚರ್ಚ್ ನಿಂದ ನಮ್ಮ ಮನೆಯಿಂದ ಸುಮಾರು 5 ಕಿ.ಮಿ಼. ಗಳ ಅಂತರ. ನಾನು ಅಲ್ಲಿಗೆ ಪ್ರತಿದಿನ ಹೋಗುವುದಿಲ್ಲ, ಆದರೆ ವಾರಕ್ಕೆ ಒಮ್ಮೆ ಹೋಗಬಹುದು. ಅಲ್ಲಿ ಬೇರೆಯವರು ಸಹ ಬರುತ್ತಾರೆ. ಆರೋಪಿತರು ನಮ್ಮ ಊರಿನವರು ಅಲ್ಲ ಎಂದರೆ, ಇರಬಹುದು. ಅವರ ಊರು ನಮ್ಮ ಊರಿನಿಂದ ಸುಮಾರು 7 – 8 ಕಿ.ಮಿ಼ಗಳು ಎಂದರೆ ಇರಬಹುದು. ಈ ಘಟನೆ ಆಗುವ ಮೊದಲು ನನಗೆ 1 ನೇ ಆರೋಪಿತನನ್ನು ನೋಡಿ ಪರಿಚಯ. ಉಳಿದವರ ಪರಿಚಯ ಇರಲಿಲ್ಲ.

2) ದೂರಿನ ಘಟನೆ ಆಗುವ ಮೊದಲು ನನ್ನ ಮತ್ತು ಅವರ ನಡುವೆ ಬೇರೆ ಯಾವುದೇ ಮಾತುಕತೆ ಆಗಿಲ್ಲ. ಚರ್ಚನಿಂದ ಬೀಚ್ ಸುಮಾರು 2 ಕಿ.ಮಿ಼ಗಳ ಅಂತರದಲ್ಲಿದೆ. ಆದಿನ ನಾನು ಬೀಚ್ ಬಳಿ ಸುಮಾರು 5.45 ಗಂಟೆಗೆ ಹೋಗಿ, 6.00 ಗಂಟೆಯವರೆಗೆ ಅಲ್ಲಿಯೇ ಇದ್ದೆ. ಆಗ ಅಲ್ಲಿ ಬೇರೆ ಯಾರಾದರೂ ಬೀಚ್ ಕಡೆಗೆ ಬಂದಿದ್ದರೋ ಎಂದು ನಾನು ಗಮನಿಸಿಲ್ಲ.

3) ನಾನು ಸನ್ಯಾಸಿ ಮಠದ ಹತ್ತಿರ ಬಂದಾಗ ಸುಮಾರು 6.30 ಗಂಟೆಯ ಸಮಯ. ಸನ್ಯಾಸಿ ಮಠಕ್ಕೂ, ಬೀಚ್ ಗೂ ಅಂತರ ಸುಮಾರು 5 ಕಿ.ಮಿ಼ಗಳು. ಸನ್ಯಾಸಿ ಮಠದ ಹತ್ತಿರ ನಾನು ಹೋಗಿದ್ದ ಅಂಗಡಿಯನ್ನು ಬಿಟ್ಟು ಬೇರೆ ಅಂಗಡಿಗಳು ದೂರದಲ್ಲಿ ಇತ್ತು. ಮನೆಗಳು ಇದ್ದವು. ನಾನು ಹೋಗಿದ್ದ ಸಮಯದಲ್ಲಿ ಅಲ್ಲಿ ಜನಸಂಚಾರ ಇರುವ ಪ್ರದೇಶ ಮತ್ತು ಜನಗಳ ಸಂಚಾರ ಇತ್ತು ಎಂದರೆ ನಿಜ. ನಾನು ಅಲ್ಲಿ ಅಂಗಡಿಯ ಹಿಂಬದಿಯಲ್ಲಿ ಸುಮಾರು 15 ನಿಮಿಷ ಕುಳಿತ್ತಿದ್ದೆ. ಆದಿನ ಅಲ್ಲಿ ಅಂಗಡಿಯ ಗಿರಾಕಿಗಳು ಬಂದಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆ ಅಂಗಡಿಯಿಂದ ಹೊರಟದ್ದು 6.45 ಗಂಟೆಯ ಸಮಯದಲ್ಲಿ.

4) ನಾನು ಕೆಮ್ಮಣ್ಣುವಿನ ಹಂಪನಕಟ್ಟೆಗೆ ಬಂದಾಗ ಸುಮಾರು 7.30 ಗಂಟೆಯ ಸಮಯ. ಹಂಪನಕಟ್ಟೆ ಜನನಿಬಿಡ ಇರುವ ಪ್ರದೇಶ ಎಂದರೆ ನಿಜ. ನಾನು

ಹಂಪನಕಟ್ಟೆಯ ಅಂಗಡಿಯಲ್ಲಿ ಸುಮಾರು ಅರ್ಧ ಗಂಟೆ ಇದ್ದೆ. ಆ ಸಮಯದಲ್ಲಿ ಅಂಗಡಿಗೆ ಗ್ರಾಹಕರು ಹೋಗಿ ಬರುತ್ತಿದ್ದರು. ಆದಿನ ನಾನು ಮನೆಗೆ ಅಲ್ಲಿಂದ ಬಿಟ್ಟ 15 ನಿಮಿಷಗಳಲ್ಲಿ ಹೋಗಿದ್ದೆ. ಆದಿನ ನಾನು ಮನೆಗೆ ಆಟೋ ರಿಕ್ಷಾದಲ್ಲಿ ಹೋಗಿದ್ದೆ.

5) ಚಾಸಾ-2 ಈತ ಬೀಚ್ ನಿಂದ ಸುಮಾರು 1 ಕಿ.ಮೀ ಅಂತರದಲ್ಲಿ ಇದ್ದ. ಆದಿನ ನಾನು ಚಾಸಾ-2 ಈತನೊಂದಿಗೆ ಯಾವುದೇ ಮಾತುಕತೆ ಮಾಡಿಲ್ಲ. ಆದಿನ ನಾನು ಚಾಸಾ-2 ಇವರ ಸೈಕಲ್ ಪಡೆದುಕೊಂಡು ಸನ್ಯಾಸಿ ಮಠದ ಬಳಿಯ ಅಂಗಡಿಗೆ ಹೋಗಿದ್ದೆ. ಬೀಚ್ ನಲ್ಲಿ ನನಗೆ ಆರೋಪಿತರೊಂದಿಗೆ ಸಿಗರೇಟ್ ನ ಬಗ್ಗೆ ಮಾತುಕತೆಯಾಗಿತ್ತು, ಬೇರೆ ಮಾತುಕತೆ ಆಗಿಲ್ಲ, ಆದರೆ ಅಲ್ಲಿ ಆರೋಪಿತರು ನನಗೆ ಹಲ್ಲೆ ಮಾಡಿದ್ದರು. ಆದಿನ ಬೀಚ್ ನಲ್ಲಿ ಆರೋಪಿತರೊಂದಿಗೆ ಎಷ್ಟು ಹೊತ್ತು ಮಾತುಕತೆಯಾಗಿತ್ತು ಎಂದರೆ, ಸುಮಾರು ಅರ್ಧ ಗಂಟೆಯವರೆಗೆ. ಆದಿನ ಆರೋಪಿತರ ಹಲ್ಲೆಯಿಂದ ನನಗೆ ಗಾಯಗಳು ಆಗಿಲ್ಲ.

6) ಆದಿನ ಸನ್ಯಾಸಿ ಮಠದ ಅಂಗಡಿಯ ಬಳಿ ಬೇರೆ ವ್ಯಕ್ತಿಗಳು ಬಂದಿದ್ದರು. ಅವರೊಂದಿಗೆ ಆರೋಪಿತರು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ನೋಡಿ ಅಂಗಡಿಯ ಒಳಗೆ ಹೋಗಿದ್ದೆ. ಮಠದ ಅಂಗಡಿಯ ಬಳಿ ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಬೈದಾಟ ಆಗಿಲ್ಲ ಎಂದರೆ ಸರಿಯಲ್ಲ. ಆದಿನ ಅಂಗಡಿಯ ಹೊರಗೆ ಯಾರು, ಎಷ್ಟು ಜನ ಬಂದಿದ್ದರು ಎಂದು ನೋಡಿಲ್ಲ. ಅಂಗಡಿಯ ಒಳಗೆ ಇಬ್ಬರು ಬಂದಿದ್ದರು. ನನ್ನನ್ನು ಅಂಗಡಿಯ ಒಳಗಿನಿಂದ ಕರೆತಂದು, ಹೊರಗೆ ನನ್ನ ಸ್ಕೂಟರ್ ನಲ್ಲಿ ಕುಳ್ಳಿರಿಸಿದ್ದರು. ಆಗ ಅಂಗಡಿಯ ಹತ್ತಿರ ಸುಮಾರು 50 ಜನರು ಸೇರಿದ್ದರು.

7) ಅಲ್ಲಿಂದ ಹಂಪನಕಟ್ಟೆಗೆ ಬಂದಾಗ ಅಲ್ಲಿಯೂ ಗಲಾಟೆ ಆಗಿತ್ತು. ಹಂಪನಕಟ್ಟೆಯ ಅಂಗಡಿಯಿಂದ ಎಷ್ಟು ದೂರದಲ್ಲಿ ಗಲಾಟೆ ಆಗಿತ್ತು ಎಂದರೆ, ಸುಮಾರು ಅರ್ಧ ಕಿ.ಮೀ ಅಂತರದಲ್ಲಿ. ಅಲ್ಲಿಯೂ ಸಹ ಜನ ಸೇರಿದ್ದರು. ಹಂಪನಕಟ್ಟೆಯಲ್ಲಿ ಗಲಾಟೆಯಾದ ಬಳಿಕ ನಾನು ನೇರ ಮನೆಗೆ ಹೋಗಿದ್ದೆ. ನನಗೆ ರಕ್ತ ಬರುವ ಗಾಯ ಎಲ್ಲಿಯೂ ಆಗಿಲ್ಲ.

8) ದೂರನ್ನು ಆಸ್ಪತ್ರೆಯಲ್ಲಿ ಬರೆದಿದ್ದೆ. ದೂರನ್ನು ನನ್ನ ಅಕ್ಕನ ಮಗಳು ಬರೆದಿದ್ದಳು. ನಾನು ಆಸ್ಪತ್ರೆಗೆ ಹಲ್ಲೆಯಾದ ದಿನವೇ ಹೋಗಿದ್ದೆ, ಆಗ ರಾತ್ರಿಯ 8.00 ಗಂಟೆಯ ಸಮಯ. ಆಗ ನನ್ನೊಂದಿಗೆ ನನ್ನ ಅಕ್ಕ ಮತ್ತು ಭಾವ ಬಂದಿದ್ದರು. ಪೊಲೀಸರು ಬೀಚ್‌ಗೆ ಬಂದದ್ದು ಮಾರನೇ ದಿನ ಮಧ್ಯಾಹ್ನ ಸುಮಾರು 1.00 ಗಂಟೆಯ ಸಮಯದಲ್ಲಿ. ಆಗ ಪೊಲೀಸರು ಮಾತ್ರವೇ ಬಂದಿದ್ದರು. ಚಾಸಾ-17 ನನಗೆ ಪರಿಚಯದವರು ಮಾತ್ರ,, ಚಾಸಾ-18 ದೂರದ ಸಂಬಂಧಿ. ಆಗ ಅವರೊಂದಿಗೆ ನಮ್ಮ ಮನೆಯವರು ಸಹ ಇದ್ದರು. ಆ ಸಮಯದಲ್ಲಿ ನಾನು, ಪೊಲೀಸರು, ಮತ್ತು ಚಾಸಾ-17 ಮತ್ತು 18 ಮಾತ್ರವೇ ಇದ್ದೆವು. ಆದಿನ ನನ್ನ ತಮ್ಮ ಮತ್ತು ಮನೆಯವರು ಸಹ ಇದ್ದರು.

9) ನಾನು ಪೊಲೀಸರೊಂದಿಗೆ ಹಂಪನಕಟ್ಟೆಗೆ ಹೋದಾಗ ಸಮಯ ಸುಮಾರು 2.00 ಗಂಟೆ. ಆಗಲೂ ಸಹ ಮನೆಯವರು ಎಲ್ಲರು ಇದ್ದರು. ನಾವು ಸನ್ಯಾಸಿ ಮಠದ ಅಂಗಡಿಯ ಬಳಿ ಹೋದಾಗ ಸುಮಾರು 3.45 ರ ಸಮಯ. ಅಲ್ಲಿಯೂ ಸಹ ಮನೆಯವರು ಇದ್ದರು. ಅಲ್ಲಿ ಅಂಗಡಿಯವರು ಇದ್ದರು. ಆನಂತರ ಅಲ್ಲಿಂದ ಠಾಣೆಗೆ ಹೋದಾಗ ಸುಮಾರು 4.00 ಗಂಟೆಯ ಸಮಯ. ಆದಿನ ನಾವು ಠಾಣೆಗೆ ನನ್ನ ಮನೆಯವರು ಮತ್ತು ಚಾಸಾ-17, 18 ಇವರ ಜೊತೆ ಹೋಗಿದ್ದೆವು. ಅಲ್ಲಿ ಸುಮಾರು ಒಂದು ಗಂಟೆಗಳ ಕಾಲ ಇದ್ದೆವು. ನಿಶಾನೆ ಪಿ-2, 4 ಮತ್ತು 6 ರ ಪಂಚನಾಮೆಗಳಿಗೆ ನಾನು ಠಾಣೆಗೆ ಹೋದ ನಂತರ ಸಹಿ ಮಾಡಿದ್ದೇನೆ ಎಂದರೆ ನಿಜ.

10) ನಾನು ಸುಮಾರು 1 ತಿಂಗಳುಗಳ ನಂತರ ಡಿ.ವೈ.ಎಸ್ಪಿ ಕಚೇರಿಗೆ ಹೋಗಿದ್ದೆ. ಆಗ ನಾನು ಗುರುರಾಜ್ ಎನ್ನುವವರೊಂದಿಗೆ ಹೋಗಿದ್ದೆ. ಅಲ್ಲಿಗೆ ನಾವು 12.00 ಗಂಟೆಯ ನಂತರ ಹೋಗಿ, 2.00 ಗಂಟೆಯವರೆಗೆ ಇದ್ದೆವು. ಆದಿನ ಅಲ್ಲಿ ಸುಮಾರು 3 ಸಹಿಗಳನ್ನು ಕೊಟ್ಟಿದ್ದೆ. ಆದಿನ ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ. ಆದಿನ ಒಂದು ಸಹಿಯನ್ನು ಸಿ.ಡಿಗಾಗಿ, ಇನ್ನೊಂದು ಸಹಿಯನ್ನು ವಾಹನಕ್ಕಾಗಿ ಕೊಟ್ಟಿದ್ದೆ. ಆದಿನ ವಾಹನವನ್ನು ನಾನೇ ತೆಗೆದುಕೊಂಡು ಹೋಗಿದ್ದೆ. ನನ್ನಿಂದ ಪೊಲೀಸರು ಯಾವುದೇ ಸಿಡಿ ಮತ್ತು ವಾಹನವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

11) ಆರೋಪಿತರು ನನಗೆ ಬೀಚ್ ನಲ್ಲಾಗಲೀ, ಹಂಪನಕಟ್ಟೆಯಲ್ಲಾಗಲೀ, ಸನ್ಯಾಸಿ ಮಠದ ಅಂಗಡಿಯಲ್ಲಾಗಲೀ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಬೈದ್ದದಾಗಲೀ, ಜಾತಿ ನಿಂದನೆ ಮಾಡಿದ್ದಾಗಲೀ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಮಾಡಲು ಕೊಟ್ಟ ಸುಳ್ಳು ದೂರಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದೂರು ಕೊಡುವ ಮೊದಲು ದಲಿತ ಸಂಘರ್ಷ ಸಮಿತಿಯೊಂದಿಗೆ ಮಾತನಾಡಿದ್ದೆ ಎಂದರೆ ನಿಜ. ಅವರ ಹೇಳಿಕೆಯ ಪ್ರಕಾರ ಈ ದೂರು ಕೊಟ್ಟಿದ್ದೇನೆ ಎಂದರೆ ನಿಜ.

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.